ಸ್ಪೆಷಲ್ ನ್ಯೂಟ್ರಿಷನ್ ಪ್ರೋಗ್ರಾಂನ್ನು ಪರಿವರ್ತಿಸಿ ಅಂಗನವಾಡಿ ಶಿಶುವಿಹಾರಗಳನ್ನಾಗಿ ಮಾಡುವುದು

೨೯೬೮. ಶ್ರೀ ಬಿ. ಆರ್. ನೀಲಕಂಠಪ್ಪ (ತುರುವೇಕೆರೆ).—ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸ್ಪೆಷಲ್ ನ್ಯೂಟ್ರಿಷನ್ ಪ್ರೋಗ್ರಾಂ ಅನ್ನು ಪರಿವರ್ತಿಸಿ ಅಂಗನವಾಡಿ ಶಿಶುವಿಹಾರಗಳನ್ನು (ಐಸಿಡಿಎಸ್) ಪ್ರಾರಂಭಿಸಲು ಸರ್ಕಾರಕ್ಕೆ ಮನವಿಗಳೇನಾದರೂ ಬಂದಿವೆಯೇ ?

ಆ) ಈ ಮನವಿಯನ್ನು ಅನುಷ್ಠಾನಕ್ಕೆ ತರಲು ಸರ್ಕಾರದವರು ಯಾವ ಯೋಜನೆಯನ್ನು ರೂಪಿಸಲು ಕ್ರಮಕೈಗೊಳ್ಳಲಾಗಿದೆ ?

ಇ) ಈ ಪರಿವರ್ತನ ಯೋಜನೆಯಿಂದ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಗೆ ಯಾವ ತರದ ಹಣದ ಖರ್ಚಿಲ್ಲದಿರುವುದರಿಂದ ಇದನ್ನು ಕಾರ್ಯರೂಪಕ್ಕೆ ತರಲು ಇರುವ ತೊಂದರೆಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಬಂದಿದೆ.

ಆ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) 'ಆ' ಭಾಗದಲ್ಲಿ ತಿಳಿಸಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಶೇ. ೧೮ ವೀಸಲಾತಿ ಸೌಲಭ್ಯಗಳನ್ನು ಸಮರ್ಪಕವಾಗಿ ತುರ್ತಾಗಿ ಜಾರಿಗೆ ತರುವುದು.

೨೯೭೬. ಶ್ರೀ ಬಿ.ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಾಲ್ಲೂಕು ಮಟ್ಟದಲ್ಲಿ ಶೇ. ೫೦ಕ್ಕಿಂತ ಹೆಚ್ಚು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿರುವ ತಾಲ್ಲೂಕುಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯನ್ನು ಪ್ರತ್ಯೇಕ ಮತ್ತು ಸ್ವತಂತ್ರ ಇಲಾಖೆಯನ್ನಾಗಿ ಪುನರ್ ರಚಿಸುವುದಾಗಿಯೂ, ೪೦,೦೦೦-೦೦ ಕ್ಕಿಂತ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರನ್ನು ಹೊಂದಿರುವ ತಾಲ್ಲೂಕುಗಳನ್ನು ೨೦೦೮ನೇ ಹಂತದಲ್ಲಿ ಈ ಇಲಾಖೆಯನ್ನು ಪ್ರತ್ಯೇಕ ಮತ್ತು ಸ್ವತಂತ್ರ ಇಲಾಖೆಯನ್ನಾಗಿ ತಾಲ್ಲೂಕು ಮಟ್ಟದಲ್ಲಿ ಪುನರ್ ರಚಿಸುವ ಬಗ್ಗೆ ಸದನದಲ್ಲಿ ಘೋಷಿಸಿದ್ದು ನಿಜವೇ ?

ಆ) ಇದರ ಪೈಕಿ ತುಮಕೂರು ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯನ್ನು ಪ್ರತ್ಯೇಕ ಮತ್ತು ಸ್ವತಂತ್ರ ಇಲಾಖೆಗಳನ್ನಾಗಿ ಪುನರ್ ರಚಿಸಲಾಗಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಮಾಜ ಕಲ್ಯಾಣ ಸಚಿವರು).—

ಅ) ಹೌದು

ಆ) ೧ ತುಮಕೂರು ತಾಲ್ಲೂಕು
೨ ಮಧುಗಿರಿ ತಾಲ್ಲೂಕು

ರಾಜ್ಯದಲ್ಲಿ ಕುರಿ ತಳಿ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸುವುದು

೩೦೨೩. ಶ್ರೀ ಪಿ. ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ರೇಷ್ಮೆ ಮತ್ತು ಪಶು ಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಕುರಿಗಳ ಸಂಖ್ಯೆ ಎಷ್ಟು ? ಇತ್ತೀಚೆಗೆ ಇದರ ಬಗ್ಗೆ ಗಣತಿ ಏನಾದರೂ ನಡೆಸಲಾಗಿದೆಯೇ ?

ಆ) ರಾಜ್ಯದಲ್ಲಿರುವ ಕುರಿ ತಳಿ ಅಭಿವೃದ್ಧಿ ಕೇಂದ್ರಗಳು ಎಷ್ಟು? ಅವು ಯಾವುವು ಅವುಗಳನ್ನು ಯಾವಾಗ ಸ್ಥಾಪನೆ ಮಾಡಲಾಯಿತು ?

ಇ) ಕುರಿ ಸಾಗೂ ಕುರಿ ಉತ್ಪನ್ನಗಳಾದ ಉಣ್ಣೆ ಮತ್ತು ಮಾಂಸ ಇವುಗಳ ರಾಜ್ಯದ ಉತ್ಪಾದನೆ ಯೀನು ? ಅವುಗಳಿಂದ ರಾಜ್ಯ ಸರ್ಕಾರಕ್ಕೆ ಒದಗುತ್ತಿರುವ ಲಾಭವೇನು ?

ಈ) ಕುರಿ ತಳಿ ಅಭಿವೃದ್ಧಿಗಾಗಿ ಸರ್ಕಾರವು ವ್ಯಾಪಕ ಕ್ರಮಕೈಗೊಂಡು ಅವುಗಳ ಸಂತತಿಯನ್ನು ಬೆಳೆಸಲು ಕ್ರಮ ಕೈಗೊಳ್ಳುವುದೇ? ಹಾಗೂ ಆಗತ್ಯವಿರುವ ಕಡೆ ಇನ್ನೂ ಒಂದೆರಡು ಕುರಿ ತಳಿ ಅಭಿವೃದ್ಧಿ ಕೇಂದ್ರಗಳನ್ನು ತೆರೆಯುವ ಯೋಜನೆ ಏನಾದರೂ ಸರ್ಕಾರದಪರ ಮುಂದೆ ಇದೆಯೇ? ಇಲ್ಲದಿದ್ದರೆ ಈ ಬಗ್ಗೆ ಯೋಜನೆ ಹಾಕಿಕೊಳ್ಳಲಾಗುವುದೇ ?

ಉ) ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿಯ ಇದುವರೆಗಿನ ಸಾಧನೆ ಏನ ಇದರ ಅಭಿವೃದ್ಧಿಗಾಗಿ ಮಂಡಳಿ ಏನೇನು ಕ್ರಮ ತೆಗೆದುಕೊಂಡಿದೆ ?

ಶ್ರೀ ಕೃಷ್ಣ (ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು).—

ಆ) ೧೯೪೫ನೆಯ ಗಣತಿ ಪ್ರಕಾರ, ರಾಜ್ಯದಲ್ಲಿರುವ ಕುರಿಗಳ ಸಂಖ್ಯೆ ೪೭,೯೦,೬೫೦. ೧೯೪೫ರ ನಂತರ ಗಣತಿ ನಡೆಸಿಲ್ಲ.

ಆ) ರಾಜ್ಯದಲ್ಲಿ ೬ ಕುರಿ ತಳಿ ಅಭಿವೃದ್ಧಿ ಕ್ಷೇತ್ರಗಳು, ೯ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆಗಳು ಅಸ್ತಿತ್ವದಲ್ಲಿರುವುವು. ಅವುಗಳ ವಿವರ ಇಂತಿದೆ.

	ಇಲಾಖೆಯಲ್ಲಿರುವ ಕ್ಷೇತ್ರಗಳು	ಸ್ಥಾಪನೆ ಮಾಡಿರುವ ವರ್ಷ
೧	ದೊಡ್ಡ ಪ್ರಮಾಣದ ಕುರಿ ಸಂಗೋಪನಾ ಕ್ಷೇತ್ರ, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ	೧೯೭೧
೨	ಕುರಿ ಸಂವರ್ಧನಾ ಕೇಂದ್ರ, ಧನಗೂರು, ಮಂಡ್ಯ ಜಿಲ್ಲೆ	೧೯೬೫
೩	ಕುರಿ ಸಂವರ್ಧನಾ ಕೇಂದ್ರ, ಆನಗವಾಡಿ, ಬಿಜಾಪುರ ಜಿಲ್ಲೆ	೧೯೪೨
೪	ಸಮ್ಮಿಶ್ರ ಕುರಿ ಮತ್ತು ಜಾನುವಾರು ಕ್ಷೇತ್ರ, ಕುರಿಕುಪ್ಪಿ, ಬಳ್ಳಾರಿ ಜಿಲ್ಲೆ	೧೯೪೮
	ಜಿಲ್ಲಾ ಪರಿಷತ್ತಿನಲ್ಲಿರುವ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆಗಳು	
೧	ಮಂಳವಳ್ಳಿ, ಮಂಡ್ಯ ಜಿಲ್ಲೆ	೧೯೮೨
೨	ಬಿಜಾಪುರ	೧೯೫೯
೩	ಹೊಸದುರ್ಗ, ಚಿತ್ರದುರ್ಗ ಜಿಲ್ಲೆ	೧೯೫೮
೪	ಯಾದಗೀರ್, ಗುಲ್ಬರ್ಗಾ ಜಿಲ್ಲೆ	೧೯೬೪
೫	ನಾಗಮಂಗಲ, ಮಂಡ್ಯ ಜಿಲ್ಲೆ	೧೯೬೪
೬	ಹೊಸಪೇಟೆ, ಬಳ್ಳಾರಿ ಜಿಲ್ಲೆ	೧೯೫೯
೭	ಚನ್ನರಾಯಪಟ್ಟಣ, ಹಾಸನ ಜಿಲ್ಲೆ	೧೯೭೨

ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿಯು ವ್ಯಾಪ್ತಿಯಲ್ಲಿರುವ ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆಗಳು

೧ ರಾಣೆಬೆನ್ನೂರು, ಧಾರವಾಡ ಜಿಲ್ಲೆ ೧೯೫೭
೨ ಕೋಲಾರ ೧೯೫೮

ಕುರಿ ಸಂವರ್ಧನಾ ಕೇಂದ್ರಗಳು

೧ ಗುತ್ತಲ್, ಧಾರವಾಡ ಜಿಲ್ಲೆ ೧೯೪೬
೨ ಸುತ್ತಟ್ಟಿ, ಬೆಳಗಾವಿ ಜಿಲ್ಲೆ ೧೯೪೭

೫) ರಾಜ್ಯದ ಕುರಿ ಉತ್ಪನ್ನಗಳ ವಿವರಗಳು ಇಂತಿವೆ

	ಉತ್ಪನ್ನಗಳು	ಪ್ರಮಾಣ	ಮೌಲ್ಯ (ರೂ. ಲಕ್ಷಗಳಲ್ಲಿ)
೧	ಮಾಂಸದ ಉತ್ಪಾದನೆ (ಪ್ರತಿ ಕುರಿಗೆ ೧೧.೨ ಕೆ.ಜಿ. ಮಾಂಸದಂತೆ ಒಂದು ಕೆ.ಜಿ. ಮಾಂಸಕ್ಕೆ ರೂ. ೩೦-೦೦ರಂತೆ) ಪಥೆ ಮಾಡಲಾದ ಕುರಿ ಪ್ರತಿಶತ ೨೬.೯೩ (೧೨೯೬,೦೦೦ ಕುರಿಗಳು)	೧೪೪೭೭.೦ ಟನ್ನುಗಳು	೪೩೪೧
	ಉಣ್ಣೆ ಉತ್ಪಾದನೆ ಪ್ರತಿ ಕುರಿಗೆ ೭೧೨ ಗ್ರಾಂ ನಂತೆ ಪ್ರತಿ ಕೆ. ಜಿ. ಉಣ್ಣೆಗೆ ರೂ ೧೩-೦೦ ರಂತೆ	೩೩೬೦ ಟನ್ನುಗಳು	೪೩೬
೩	ಚರ್ಮ (ಪ್ರತಿ ತುಕಡಿಗೆ ರೂ. ೨೦.೦೦)	೧೨೯೬೦೦೦ ತುಕಡಿ	೨೫೯
೪	ಆಫಲ್ಸ್ (ಚರಟ ಮಾಂಸ) (ಪ್ರತಿ ತುಕಡಿಗೆ ರೂ ೨೫)	೧೨೯೬೦೦ ತುಕಡಿ	೩೨೪
೫	ಗೊಬ್ಬರ (ಪ್ರತಿ ಟನ್‌ಗೆ ರೂ. ೧೫೦-೦೦)	೪.೫ ಲಕ್ಷ ಟನ್	೬೭೫

ಇವುಗಳಿಂದ ರಾಜ್ಯ ಸರ್ಕಾರಕ್ಕೆ ಯಾವುದೇ ಲಾಭ ಬರುತ್ತಿಲ್ಲ

ಈ) ೧ ೨೯.೮೮ ಕೋಟಿ ರೂಪಾಯಿಗಳ ಬೃಹತ್ ಪ್ರಮಾಣದ ಕುರಿ ಅಭಿವೃದ್ಧಿ ಯೋಜನೆಯನ್ನು ವಿಶ್ವ ಬ್ಯಾಂಕ್ ನೆರವಿನಿಂದ ಕಾರ್ಯಗತಗೊಳಿಸಲು ಕರ್ನಾಟಕದ ೯ ಜಿಲ್ಲೆಗಳಾದ ವಿಜಾಪುರ, ಬೆಳಗಾವಿ, ಧಾರವಾಡ ಬಳ್ಳಾರಿ, ತುಮಕೂರು, ಬೆಂಗಳೂರು ಕೋಲಾರ, ಮಂಡ್ಯ, ಚಿತ್ರದುರ್ಗಗಳಲ್ಲಿ ಉದ್ದೇಶಿಸಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ.

೨ ಕೇಂದ್ರ ಸರ್ಕಾರದ ಧನ ಸಹಾಯದಿಂದ ೫೦ ಲಕ್ಷ ರೂ.ಗಳ ಬೃಹತ್ ಪ್ರಮಾಣದ ಚಳ್ಳಕೆರೆಯಲ್ಲಿನ ಕುರಿ ಸಂಗೋಪನಾ ಕ್ಷೇತ್ರವನ್ನು ಅಭಿವೃದ್ಧಿಗೊಳಿಸಲು ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಇದಲ್ಲದೆ ಹೊಸದಾಗಿ ಕುರಿ ತಳಿ ಅಭಿವೃದ್ಧಿ ಕ್ಷೇತ್ರಗಳನ್ನು ತೆರೆಯುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಉ) ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿಯು ಸಾಧನೆಗಳು

೧) ಪ್ರತಿ ವರ್ಷ ಸರಾಸರಿ ೧.೦೦ ಲಕ್ಷ ಕುರಿಗಳಿಗೆ ಸಾಂಕ್ರಾಮಿಕ ರೋಗಗಳ ವಿರುದ್ಧ ಚುಚ್ಚು ಮದ್ದು ಹಾಕಲಾಗಿದೆ, ೨.೨ ಲಕ್ಷ ಕುರಿಗಳಿಗೆ ಜಂತು ನಾಶಕ ಔಷಧಿ ಕುಡಿಸಲಾಗುತ್ತಿದೆ. ೧೫ ಸಾವಿರ ಕುರಿಗಳಿಗೆ ಚಿಕಿತ್ಸೆ ನೀಡಲಾಗಿದೆ. ಸರಾಸರಿ ವರ್ಷಕ್ಕೆ ೮೦ ಮಿಶ್ರ ತಳಿ ಟಗರುಗಳನ್ನು ರೈತರಿಗೆ ಹಂಚಲಾಗಿದೆ.

೨) ೧೯೮೭-೮೮ನೇ ಸಾಲಿನಲ್ಲಿ ೧೦.೮೧ ಟನ್‌ಗಳು ಉಣ್ಣೆ ಕೊಳ್ಳಲಾಗಿದೆ. ರೂ. ೧,೨೫,೫೮೫ ರಷ್ಟು ಮೌಲ್ಯದ ಉಣ್ಣೆ ಮತ್ತು ರೂ. ೫೮,೦೧೬-೭೫ ರಷ್ಟು ಮೌಲ್ಯದ ಉಣ್ಣೆ ವಸ್ತುಗಳ ಮಾರಾಟ ಮಾಡಲಾಗಿದೆ.

೩) ಇತ್ತೀಚೆಗೆ ಮಂಡಳಿಯ ಅಧೀನದ ಎರಡು ಪ್ರಾರಂಗಳಲ್ಲಿ ತಳಿ ಅಭಿವೃದ್ಧಿಗಾಗಿ ಅಮೇರಿಕಾ ಸಂಯುಕ್ತ ಸಂಸ್ಥಾನದಿಂದ ೯ ರ್ಯಾಂಬುಲ್ ತಳಿಯ ಟಗರುಗಳನ್ನು ಆಮದು ಮಾಡಿಕೊಳ್ಳಲಾಗಿದೆ. ಇದಲ್ಲದೆ ಪ್ರಗತಿಪರ ರೈತರಿಬ್ಬರಿಗೆ ತಲಾ ಒಂದು ರ್ಯಾಂಬುಲ್ ಟಗರನ್ನು ತಳಿ ಅಭಿವೃದ್ಧಿಗಾಗಿ ನೀಡಲಾಗಿದೆ.

೪) ಧಾರವಾಡ ಜಿಲ್ಲೆಯಲ್ಲಿ ಐರಣಿ, ರಾಣಿಬೆನ್ನೂರು ಹಾಗೂ ಕೋಲಾರ ಜಿಲ್ಲೆಯ ಬಡಮಾಕನ ಹಳ್ಳಿಯಲ್ಲಿ ಹಂಜಿ ಯಂತ್ರ ಸ್ಥಾಪಿಸಿ ನೇಕಾರರಿಗೆ ಹಂಜಿ ಮಾಡುವ ಸೌಲಭ್ಯ ನೀಡಲಾಗುತ್ತಿದೆ.

ಉದ್ದೇಶಿತ ಅಭಿವೃದ್ಧಿ ಕಾರ್ಯಕ್ರಮಗಳು

೧ ಮಂಡಳಿಯನ್ನು ನಿಗಮವನ್ನಾಗಿ ಪರಿವರ್ತಿಸಲು ಪರಿಶೀಲಿಸಲಾಗುತ್ತಿದೆ.

೨ ವಿಶ್ವ ಬ್ಯಾಂಕ್ ನೆರವಿನ ಯೋಜನೆ, ಅನುಷ್ಠಾನವಾದಲ್ಲಿ ಮಂಡಳಿಯು ಸಮಗ್ರವಾಗಿ ಹಾಗೂ ಹೆಚ್ಚು ವ್ಯಾಪಕವಾಗಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅನುವಾಗಲಿದೆ.

೩ ಕೋಲಾರದಲ್ಲಿ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದಿಂದ ಕೈಗಾರಿಕೆ ಷೆಡ್ ಒಂದನ್ನು ಕೊಂಡಿದ್ದು, ಇಲ್ಲಿ ಸದ್ಯದಲ್ಲಿ ಉಣ್ಣೆ ಹಂಜಿ ಮಾಡಿ ಮುಂದೆ ಉಣ್ಣೆ ಸಂಸ್ಕರಣಾ ಹಾಗೂ ಉಣ್ಣೆ ವಸ್ತ್ರಗಳ ಉತ್ಪಾದನೆ ಕಾರ್ಯಕ್ರಮಗಳನ್ನು ಆರಂಭಿಸಲಾಗುವುದು. ಇದರಿಂದ ಕನಿಷ್ಠ ೨೫ ಮಂದಿ ವೃತ್ತಿ ಪರರಿಗೆ ಉದ್ಯೋಗ ಅವಕಾಶ ಕಲ್ಪಿಸಲಾಗುವುದು.

೪ ರಾಣಿಬೆನ್ನೂರಿನಲ್ಲಿ ಸಾಮೂಹಿಕ ನೂಲುವ ಮತ್ತು ನೇಯುವ ಕೇಂದ್ರದ ಕಟ್ಟಡವೊಂದು ನಿರ್ಮಾಣವಾಗುತ್ತಿದ್ದು ಇಲ್ಲಿ ನೇಕಾರರಿಗೆ ಹಾಗೂ ನೂಲುವವರಿಗೆ ತುಂಡು ಕೆಲಸದ ಆಧಾರದ ಮೇಲೆ ಉಣ್ಣೆ ವಸ್ತ್ರಗಳ ತಯಾರಿಕೆ ಹಾಗೂ ಉಣ್ಣೆದಾರ ತಯಾರಿಕೆಯಲ್ಲಿ ಉದ್ಯೋಗಾವಕಾಶ ಕಲ್ಪಿಸಲಾಗುವುದು.

ಉದ್ಯೋಗಸ್ಥ ಮಹಿಳೆಯರ ವಸತಿ ಗೃಹ

೪೦೩೬ ಶ್ರೀ ಬಿ. ಎ. ಉಮರಬ್ಬ (ವಿಟ್ಲ).— ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೮) ಬೆಂಗಳೂರಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಆರಂಭಿಸಿದ ಉದ್ಯೋಗಸ್ಥ ಮಹಿಳೆಯರ ವಸತಿ ಗೃಹಗಳೆಷ್ಟು?

೯) ಇತ್ತೀಚೆಗೆ ಮಳೆ ಹಾನಿಗೀಡಾಗಿ ತೊಂದರೆ ಅನುಭವಿಸಿದ ಉದ್ಯೋಗಸ್ಥೆ ಮಹಿಳೆಯರಿಗೆ ಈ ಮೇಲಿನ ವಸತಿ ಗೃಹಗಳಲ್ಲಿ ಉಳಿಯಲು ಅವಕಾಶ ಮಾಡಿಕೊಡಲಾಗಿದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು).—

೮) ೧೪

೯) ಎಂ.ಟಿ.ಬಿ. ರಸ್ತೆಯಲ್ಲಿರುವ ಉದ್ಯೋಗಸ್ಥೆಯರ ಮಹಿಳೆಯರ ವಸತಿ ಗೃಹವು ನೀರಿನಿಂದ ತುಂಬಿದ್ದರಿಂದ ವಸತಿದಾರರಿಗೆ ಸುರಕ್ಷತೆ ದೃಷ್ಟಿಯಿಂದ ಬೇರೆ ಕಡೆ ವ್ಯವಸ್ಥೆ ಮಾಡಿದ್ದರೂ ಅವರು ಈ ವ್ಯವಸ್ಥೆಯನ್ನು ನಿರಾಕರಿಸಿ ಅದೇ ಕಟ್ಟಡದಲ್ಲಿ ಇರುತ್ತಾರೆ.